KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar, Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-417/ UGCE/2022-23/525 Date: 28 OCT 2022

**ಸುತ್ತೋಲೆ–9**

ವಿಷಯ: 2022–23ನೇ ಸಾಲಿನ ಸ್ನಾತಕ B.Sc ಪದವಿ 1ನೇ ಸೆಮಿಸ್ಟರ್ ಪ್ರವೇಶ ದಿನಾಂಕವನ್ನು ವಿಸ್ತರಿಸುವ ಕುರಿತು.

ಉಲ್ಲೇಖ:
1. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/277, ದಿ: 23.06.2022.
2. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/425, ದಿ: 12.07.2022.
3. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/593, ದಿ: 29.07.2022.
4. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/690, ದಿ:06.08.2022.
5. ಸರ್ಕಾರದ ಆದೇಶ ಸಂ. ಇಡಿ/217/ಯುಎನ್ಇ/2022,ಬೆಂಗಳೂರು, ದಿ: 17.08.2022.
6. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/745, ದಿ:18.08.2022
7. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/491, ದಿ:08.09.2022
8. ಕಚೇರಿ ಸುತ್ತೋಲೆ ಸಂ.KU / Aca(S&T) / SSL-425 / UGAdmn.rules / PUC-Suppl. / 2022-23 / 994, ದಿನಾಂಕ: 13.09.2022
9. ಕಚೇರಿ ಸುತ್ತೋಲೆ ಸಂ.KU / Aca(S&T) / SSL-425 / UGAdmn.rules / PUC-Suppl. / 2022-23 / 505, ದಿನಾಂಕ: 16.09.2022
10. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/1081, ದಿ:27.09.2022
11. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2022-23/1120, ದಿ:06.10.2022
12. ಸರ್ಕಾರದ ಆದೇಶ ಸಂ. ಇಡಿ/217/ಯುಎನ್ಇ/2022,ಬೆಂಗಳೂರು, ದಿ: 21.10.2022
13. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 27-10-2022

-----

ಮೇಲ್ಕಾಣಿಸಿದ ವಿಷಯ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಎಲ್ಲ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರ ಗಮನಕ್ಕೆ ತರಬಯಸುವುದೇನೆಂದರೆ, 2022–23ನೇ ಸಾಲಿಗೆ NEP ಅಡಿಯಲ್ಲಿ ಸ್ನಾತಕ B.Sc ಪದವಿ 1ನೇ ಸೆಮಿಸ್ಟರ್ ಕೋರ್ಸಿಗೆ ವಿಶೇಷ ದಂಡ 6670/–(4670+2000) ರಂತೆ ದಿನಾಂಕ: 27.10.2022 ರಿಂದ 29.10.2022 ವರೆಗೆ ಅವಧಿ ವಿಸ್ತರಿಸಲಾಗಿದೆ. **ಪ್ರವೇಶ ಪಡೆದ ವಿದ್ಯಾರ್ಥಿಗಳ ದಂಡ ರಹಿತ, ದಂಡಸಹಿತ, ವಿಶೇಷ ದಂಡ ಅನ್ವಯಿಸುವ ವಿದ್ಯಾರ್ಥಿಗಳ ಯಾದಿಗಳೊಂದಿಗೆ ಕ.ವಿ.ವಿ.ಗೆ ಅಗತ್ಯ ದಾಖಲೆಗಳೊಂದಿಗೆ ದಿನಾಂಕ 31.10.2022 ರೊಳಗಾಗಿ ಸಲ್ಲಿಸುವುದು. ತಪ್ಪಿದಲ್ಲಿ ಉಲ್ಲೇಖ 01 ರಲ್ಲಿ ತಿಳಿಸಿದಂತೆ ಪ್ರತಿ ದಿನ ವಿಳಂಬಕ್ಕೆ ರೂ. 130/– ರಂತೆ ದಂಡ ಆಕರಿಸಲಾಗುವುದು ಹಾಗೂ** ಉಲ್ಲೇಖ 06ರ ಸುತ್ತೋಲೆಯ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ B.Sc ಪದವಿ ಕೋರ್ಸಿಗೆ ದಿನಾಂಕ: 27.10.2022 ರಿಂದ 29.10.2022ರ ವರೆಗೆ ವಿಸ್ತರಿಸಲಾಗಿದೆ.

ಮುಂದುವರೆದು, ದಿನಾಂಕ 29.10.2022 ವರೆಗೆ ಪ್ರವೇಶ ನೀಡಿದ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ರಜಾ ಹಾಗೂ ಕರ್ತವ್ಯದ ದಿನಗಳಲ್ಲಿ ವಿಶೇಷ ತರಗತಿಗಳನ್ನು ಹೆಚ್ಚುವರಿಯಾಗಿ ತೆಗೆದುಕೊಂಡು ಶೇ. 75 ರಷ್ಟು ಹಾಜರಾತಿಯನ್ನು ಪ್ರಾಚಾರ್ಯರು ಪೂರೈಸುವ ಕರಾರಿಗೊಳಪಟ್ಟು ಪ್ರವೇಶ ನೀಡತಕ್ಕದ್ದು.

ಸದರ ಮಾಹಿತಿಯನ್ನು ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಎಲ್ಲ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರು ಈ ಸುತ್ತೋಲೆಯಂತೆ ಕ್ರಮವಹಿಸಲು ತಿಳಿಯಪಡಿಸಿದೆ.

ಅಡಕ: ಮೇಲಿನಂತೆ.

27/x/22
ಕುಲಸಚಿವರು

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿ:**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ (CDC) / ವಿದ್ಯಾರ್ಥಿ ಕಲ್ಯಾಣ ವಿಭಾಗ / ಐ.ಟಿ. ವಿಭಾಗ, ಕ.ವಿ.ವಿ. ಧಾರವಾಡ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 217 ಯುಎನ್ಇ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 21-10-2022.

**ಇವರಿಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು – 560 001.

**ಇವರಿಗೆ:**

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು 560 001
2. ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಎಲ್ಲಾ ಸರ್ಕಾರಿ / ಖಾಸಗಿ ವಿಶ್ವವಿದ್ಯಾಲಯಗಳ ಕುಲಸಚಿವರು
3. ಎಲ್ಲಾ ಸಂಯೋಜಿ ಕಾಲೇಜುಗಳಿಗೆ – ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳ ಮುಖಾಂತರ
4. ಸರ್ಕಾರಿ/ಅನುದಾನಿತ/ಅನುದಾನರಹಿತ ಕಾಲೇಜುಗಳ ಪ್ರಾಂಶುಪಾಲರಿಗೆ – ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಮುಖಾಂತರ

ಮಾನ್ಯರೆ,

ವಿಷಯ: 2022-23ನೇ ಸಾಲಿಗೆ B.Sc. ಪದವಿ ಪ್ರವೇಶಾತಿಗೆ ಕಾಲಾವಕಾಶ ವಿಸ್ತರಿಸುವ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂ. ಇಡಿ 217 ಯುಎನ್ಇ 2022, ದಿನಾಂಕ: 26-9-2022

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಪತ್ರದಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿ ಬರುವ ವಿಶ್ವವಿದ್ಯಾಲಯಗಳು/ಕಾಲೇಜು ಶಿಕ್ಷಣ/ಅನುದಾನ/ ಅನುದಾನ ರಹಿತ ಕಾಲೇಜುಗಳಲ್ಲಿ (ತಾಂತ್ರಿಕ ಶಿಕ್ಷಣವನ್ನು ಹೊರತುಪಡಿಸಿ) 2022-23ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸುಗಳ ಪ್ರವೇಶಾತಿಯನ್ನು ವಿದ್ಯಾರ್ಥಿಗಳ ಹಾಜರಾತಿ ಮತ್ತು ಸಾಮಾನ್ಯ ತರಗತಿಗಳಿಗೆ ಯಾವುದೇ ತೊಂದರೆಯಾಗದಂತೆ ದಿನಾಂಕ:30.09.2022ರವರೆಗೆ ಪ್ರವೇಶಾತಿಯನ್ನು ವಿಸ್ತರಿಸಲಾಗಿರುತ್ತದೆ.

ಪ್ರಸ್ತುತ C.E.T. Counseling ತಡವಾಗಿರುವುದರಿಂದ, Counseling ಪೂರ್ಣಗೊಂಡ ನಂತರ ಕೆಲವೊಂದು ವಿದ್ಯಾರ್ಥಿಗಳು B.Sc. ಪದವಿಗೆ ಪ್ರವೇಶಾತಿ ಪಡೆಯುವ ಸಾಧ್ಯತೆ ಇರುವುದರಿಂದ ಹಾಗೂ ಹಾಲಿ B.Sc. ಪದವಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯು ಕಡಿಮೆ ಆಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ, ಈಗಾಗಲೇ ಸಂಯೋಜನ ನೀಡಲಾದ B.Sc. ಪದವಿ ಕೋರ್ಸ್‌ಗಳಿಗೆ ಅನ್ವಯಿಸುವಂತೆ ಮಾತ್ರ ಪ್ರವೇಶಾತಿಗೆ ಕಾಲಾವಕಾಶವನ್ನು ದಿನಾಂಕ: 29-10-2022 ವರೆಗೆ ಮಾತ್ರ ಈ ಕೆಳಕಂಡ ಷರತ್ತಿಗೊಳಪಟ್ಟು ವಿಸ್ತರಿಸಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

- ಅಸ್ತಿತ್ವದಲ್ಲಿರುವ ತರಗತಿಗಳು ಮತ್ತು ಕೋರ್ಸ್‌ಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.
- ತರಗತಿಗಳು, ಪ್ರಾಯೋಗಿಕ ಪರೀಕ್ಷೆ ಅಥವಾ ಲಿಖಿತ ಪರೀಕ್ಷೆಗಳನ್ನು ಬದಲಾಯಿಸುವಂತಿಲ್ಲ ಮತ್ತು ಮುಂದೂಡುವುವಂತಿಲ್ಲ. ಉನ್ನತ ಶಿಕ್ಷಣ ಇಲಾಖೆಯು ಹೊರಡಿಸಿರುವ ವೇಳಾಪಟ್ಟಿಯನ್ವಯ ಕಟ್ಟುನಿಟ್ಟಾಗಿ ಅನುಸರಿಸ ತಕ್ಕದ್ದು.
- ಅಸ್ತಿತ್ವದಲ್ಲಿರುವ ಯಾವುದೇ ಕೋರ್ಸ್‌ಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.

ತಮ್ಮ ನಂಬುಗೆಯ,

**(ಶೀತಲ್ ಎಂ. ಹಿರೇಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1).